ವಿಜಯವಾಣಿ
ಕನ್ನಡಿಗರ ಧ್ವನಿ

ರಾಜಧಾನಿ ಅ|ತಿ|ಥಿ

# ಬೆಂಗಳೂರಲ್ಲಿ ನನ್ನ ಹಸಿಹಸಿ ನೆನಪುಗಳಿವೆ

ಸಿಲಿಕಾನ್ ಸಿಟಿಗೆ ಬಂದ ಶರ್ಮನ್ ಜೋಶಿ ಮನದಾಳ



ರಂಗ್ ದೆ ಬಸಂತಿ, ಗೋಲ್‌ಮಾಲ್, ತ್ರೀ ಈಡಿಯಟ್ಸ್ ಮುಂತಾದ ಚಿತ್ರಗಳ ಮೂಲಕ ಪ್ರೇಕ್ಷಕರ ಹೊಟ್ಟೆ ಹುಣ್ಣಾಗಿಸಿದ್ದ ಶರ್ಮನ್ ಜೋಷಿ, ಸೋಮವಾರ ನಿಮ್ಹಾನ್ಸ್ ಕನ್‌ವೆನ್‌ಷನ್ ಸೆಂಟರ್‌ನಲ್ಲಿ ಜೈನ್ ವಿಶ್ವವಿದ್ಯಾಲಯ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಉತ್ಸವದಲ್ಲಿ ಪಾಲ್ಗೊಂಡಿದ್ದರು. ತ್ರೀ ಈಡಿಯಟ್ಸ್‌ನ ರಾಜು ರಸ್ತೋಗಿ ಪಾತ್ರಕ್ಕಾಗಿ ಇಂಟರ್‌ನ್ಯಾಷನಲ್ ಇಂಡಿಯನ್ ಫಿಲ್ಮ್ ಅಕಾಡೆಮಿಯಿಂದ ಉತ್ತಮ ಸಹನಟ ಪ್ರಶಸ್ತಿಯನ್ನೂ ಪಡೆದಿರುವ ಶರ್ಮನ್ ಜೋಷಿ ವಿಜಯವಾಣಿ ಗುಡ್ ಮಾರ್ನಿಂಗ್ ಬೆಂಗಳೂರು ಜತೆ ಮಾತಿಗಿಳಿದರು. ಇದರ ಸಂಕ್ಷಿಪ್ತ ರೂಪ ನಿಮ್ಮ ಮುಂದೆ.

ಕೇಶವಮೂರ್ತಿ ವಿ.ಬಿ.

**ಬೆಂಗಳೂರಿಗೆ ಸ್ವಾಗತ. ಬೆಂಗಳೂರು ಬೆಂಗಳೂರಿಗರ ಬಗ್ಗೆ ನಿಮ್ಮ ಅಭಿಪ್ರಾಯ..**

– ಥ್ಯಾಂಕ್ ಯೂ. ಐ ಲವ್ ಬೆಂಗಳೂರು. 15 ವರ್ಷಗಳ ಹಿಂದೆ ಮೊದಲ ಬಾರಿ ಇಲ್ಲಿಗೆ ಬಂದಿದ್ದೆ. ಇಲ್ಲಿನ ತಂಪಾದ ವಾತಾವರಣಕ್ಕೆ ಮನಸೋತಿದ್ದೇನೆ. ನಮ್ಮ ದೇಶ ಹೇಗೆ ವಿವಿಧತೆಯಲ್ಲಿ ಏಕತೆಯನ್ನು ತಳೆದಿದೆಯೋ ಅದೇ ರೀತಿ ಬೆಂಗಳೂರು ಬಗೆ ಬಗೆಯ ಜನರನ್ನು ತನ್ನ ತೆಕ್ಕೆಯಲ್ಲಿರಿಕೊಂಡಿರುವುದು ನನಗೆ ಇಷ್ಟವಾಯ್ತು. ದೇಶದ ಅತ್ಯುತ್ತಮ ನಗರಗಳಲ್ಲಿ ಇದೂ ಒಂದು.

**ಬೆಂಗಳೂರಿನೊಂದಿಗೆ ನಿಮ್ಮ ನಂಟು ಹೇಗೆ ?**

– ತ್ರೀ ಈಡಿಯಟ್ಸ್ ಚಿತ್ರೀಕರಣ ವೇಳೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ತಿಂಗಳ ಕಾಲ ಇಲ್ಲೇ ಉಳಿದುಕೊಂಡಿದ್ದೆ. ಹೀಗಾಗಿ ಬೆಂಗಳೂರಿನ ಜತೆ ನನ್ನ ನಂಟು. ಆ ಸಮಯದಲ್ಲಿ ನಗರದ ಬೀದಿಗಳಲ್ಲಿ ನಾನು ಓಡಾಡಿದ್ದೇನೆ. ಇದು ವಾಸಕ್ಕೆ ಅತ್ಯುತ್ತಮವಾದ ನಗರ ಎಂಬುದು ನನ್ನ ಅಭಿಪ್ರಾಯ.

**ಸಿಎಂಎಸ್ ಸಾಂಸ್ಕೃತಿಕ ಉತ್ಸವದಲ್ಲಿ ಸಾವಿರಾರು ವಿದ್ಯಾರ್ಥಿಗಳೊಂದಿಗೆ ನೀವೂ ಭಾಗಿಯಾಗಿದ್ದೀರಿ ಏನನ್ನಿಸುತ್ತಿದೆ ?**

– ಜೈನ್ ವಿಶ್ವವಿದ್ಯಾಲಯದ ಸಿಎಂಎಸ್ ಇನ್‌ಸ್ಟಿಟ್ಯೂಟ್‌ನಂತಹ ದೊಡ್ಡ ಜಾಲ ಹೊಂದಿರುವ ಮತ್ತು ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಕಾಲ ಕಳೆಯುವುದು ನನಗೆ ಸಿಕ್ಕ ಒಳ್ಳೆಯ ಅವಕಾಶ. ಹೊಸ ಹೊಸ ವಿಚಾರಗಳೊಂದಿಗೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿ ಕೊಡುತ್ತಿರುವ ಈ ಸಂಸ್ಥೆಯ ಉತ್ಸವದಲ್ಲಿ ಭಾಗವಹಿಸುತ್ತಿರುವುದು ಸಂತಸದ ವಿಚಾರ.

**ನಿಮ್ಮ ಹವ್ಯಾಸಗಳು ಮತ್ತು ವೇದಿಕೆ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

– ಪ್ರಯಾಣ ಮಾಡುವುದು ಮತ್ತು ಒಳ್ಳೆಯ ಸಿನಿಮಾ ನೋಡುವುದು ನನ್ನ ನೆಚ್ಚಿನ ಹವ್ಯಾಸಗಳು. ವೇದಿಕೆ ಕಾರ್ಯಕ್ರಮಗಳು, ರಂಗಭೂಮಿ ಕಾರ್ಯಕ್ರಮಗಳು, ದೂರದರ್ಶನ ರಿಯಾಲಿಟಿ ಶೋಗಳಲ್ಲಿ ನಾನು ಭಾಗವಹಿಸಿದ್ದೇನೆ. ಇಂತಹ ಕಾರ್ಯಕ್ರಮಗಳು ನನಗೆ ತುಂಬಾ ಇಷ್ಟ. ಈ ಕಾರ್ಯಕ್ರಮದಲ್ಲಿ ನೆರೆದಿರುವ ಯುವಜನರ ಉತ್ಸಾಸ-ಹುಮ್ಮಸ್ಸು ನನ್ನನ್ನು ಸದಾ ಉತ್ತೇಜಿಸುತ್ತದೆ. ಅದನ್ನು ನೋಡಲು ಮನಸ್ಸು ಹಾತೊರೆಯುತ್ತದೆ.

**ಮುಂದಿನ ನಿಮ್ಮ ಸಿನಿಮಾಗಳ ಬಗ್ಗೆ ತಿಳಿಸಿ..**

– ಹೇಟ್ ಸ್ಟೋರಿ–3 ಚಿತ್ರೀಕರರಣ ಮುಕ್ತಾಯದ ಹಂತ ತಲುಪಿದೆ. ಕಾಮನ್ ಫ್ಯಾಕ್ಟರ್ ಹಾಗೂ ಟಾಮ್ ಡಿಕ್ ಆ್ಯಂಡ್ ಹ್ಯಾರಿ ಹಂತ ಹಂತವಾಗಿ ಚಿತ್ರೀಕರಣ ನಡೆಯಲಿವೆ. ಇನ್ನೂ ಹಲವು ಅವಕಾಶಗಳು ಬಂದಿವೆ. ಉತ್ತಮ ಕಥೆ, ಪಾತ್ರ ಆಧರಿಸಿ ಮುಂದಿನ ಸಿನಿಮಾ ಒಪ್ಪಿಕೊಳ್ಳುತ್ತೇನೆ.

**ಬೆಂಗಳೂರಿಗರಿಗೆ ಏನು ಹೇಳಬಯಸುತ್ತೀರಿ ?**

– ಇಂತಹ ಒಂದು ಅದ್ಭುತ ನಗರದಲ್ಲಿ ವಾಸಿಸುತ್ತಿರುವ ನೀವೇ ಅದೃಷ್ಟವಂತರು. ನಾನು ಮತ್ತೆ ಮತ್ತೆ ಬೆಂಬಗಳೂರಿಗೆ ಬರಲು ಬಯಸುತ್ತೇನೆ. ನಿಮ್ಮೊಂದಿಗೆ ಹರಟಲು ಇಷ್ಟಪಡುತ್ತೇನೆ. ಏಕೆಂದರೆ ಇಲ್ಲಿ ನಾನು ಮರೆಯಲಾರದಂಥ ನನ್ನ ನೆನಪುಗಳಿವೆ.

---

CAMPUS ಕಾರ್ನರ್

# ಲಾಸ್ಯ ಉತ್ಸವದಲ್ಲಿ ವಿದ್ಯಾರ್ಥಿಗಳ ಮೋಡಿ

ವಿದ್ಯಾರ್ಥಿಗಳು ಎಲ್ಲಿರುತ್ತಾರೋ ಅಲ್ಲೊಂದು ಸ್ಪರ್ಧಾತ್ಮಕ ಮತ್ತು ಉತ್ಸಾಹ ಭರಿತ ಜಗತ್ತು ಅನಾವರಣಗೊಂಡಿರುತ್ತದೆ. ಇಂತಹ ಒಂದು ವಾತಾವರಣಕ್ಕೆ ಸಾಕ್ಷಿಯಾಗಿದ್ದು ಜೈನ್ ವಿಶ್ವ ವಿದ್ಯಾಲಯದ ಲಾಸ್ಯ ಸಾಂಸ್ಕೃತಿಕ ಉತ್ಸವ. ನೃತ್ಯ, ಫ್ಯಾಷನ್ ಶೋ, ನಟನಾ ಕೌಶಲ್ಯ, ಬೀದಿ ನಾಟಕ, ಮ್ಯಾಡ್ ಆ್ಯಡ್ಸ್, ಕ್ವಿಜ್ ಮುಂತಾದ ಹತ್ತು ಹಲವು ಚಟುವಟಿಕೆಗಳಲ್ಲಿ ಮಿಂದೆದ್ದ ವಿದ್ಯಾರ್ಥಿಗಳು ಉತ್ಸವ ಕಳೆಗಟ್ಟುವಂತೆ ಮಾಡಿದ್ದರು.



**ಮೊ**ಘಲ್ ಸಾಮ್ರಾಜ್ಯದ ಅರಸರ ಉಡುಗೆ ತೊಡಿಗೆಗಳನ್ನುಟ್ಟ ಯುವಕ–ಯುವತಿಯರು ಬೆಕ್ಕಿನ ನಡಿಗೆಯಲ್ಲಿ ಸಾಗುತ್ತಿದ್ದರೆ ನೆರೆದಿದ್ದವರು ಶಿಳ್ಳೆ, ಚಪ್ಪಾಳೆಗಳ ಮೂಲಕ ಸ್ಪರ್ಧಾಳುಗಳನ್ನು ಹುರಿದುಂಬಿಸುತ್ತಿದ್ದರು. ಅಕ್ಷರಶಃ ಅಲ್ಲೊಂದು ಮೊಘಲ್ ಸಾಮ್ರಾಜ್ಯವೇ ಸೃಷ್ಟಿಯಾಗಿತ್ತು.

ಜೈನ್ ವಿಶ್ವ ವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್(ಸಿಎಂಎಸ್) ಕಾಲೇಜು 'ಲಾಸ್ಯ' ಹೆಸರಿನಲ್ಲಿ ಹೊಸೂರು ರಸ್ತೆಯಲ್ಲಿರುವ ನಿಮ್ಹಾನ್ಸ್ ಕನ್ವೆನ್‌ಷನ್ ಹಾಲ್‌ನಲ್ಲಿ ಅಂತರ್ ಕಾಲೇಜು ಸಾಂಸ್ಕೃತಿಕ ಉತ್ಸವ ಏರ್ಪಡಿಸಿತ್ತು. ಈ ನಿಮಿತ್ತ ನಡೆದ 'ಮೊಘಲ್ ದರ್ಬಾರ್' ಕಲ್ಪನೆಯ ಫ್ಯಾಷನ್ ಶೋನ ಒಂದು ಝುಲಕ್ ಇದು.



10ರಿಂದ 15 ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರನ್ನೊಳಗೊಂಡ ಒಂದೊಂದು ತಂಡ, ಮೊಘಲ್ ಸಾಮ್ರಾಜ್ಯದ ಅರಸರು, ಮಹಾರಾಣಿಯರು ಧರಿಸುತ್ತಿದ್ದ ಉಡುಗೆಗಳನ್ನು ತೊಟ್ಟು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದರು. ಯಾವುದೇ ವೃತ್ತಿಪರ ಫ್ಯಾಷನ್ ಶೋ, ವೃತ್ತಿಪರ ರೂಪದರ್ಶಿಯರಿಗಿಂತ ನಾವೇನು ಕಮ್ಮಿ ಇಲ್ಲ ಎಂಬುವಂತೆ ಅದ್ಭುತ ಪ್ರದರ್ಶನ ನೀಡಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡರು.

ಗುಂಪು ನೃತ್ಯ ಸ್ಪರ್ಧೆಯಲ್ಲಿ ಸ್ಯಾಂಡಲ್‌ವುಡ್, ಬಾಲಿವುಡ್ ಗೀತೆಗಳಿಗೆ ವಿದ್ಯಾರ್ಥಿಗಳು ನರ್ತಿಸಿ, ಸಂಭ್ರಮಿಸಿದರು. ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ, ಯಕ್ಕಾ ನಿನ್ ಮಗಳು ನಂಗೆ ಚಿಕ್ಕವಳಾಗಲ್ವಾ ?, ಓಂ ಶಾಂತಿ ಓಂ, ದಿವಾನಗಿ, ಢಂ ಢಂ ಡೋಲು ಭಾಜೆ ಮುಂತಾದ ಗೀತೆಗಳಿಗೆ ವಿವಿಧ ಕಾಲೇಜು ವಿದ್ಯಾರ್ಥಿಗಳು ನರ್ತಿಸಿ ಪ್ರೇಕ್ಷಕರನ್ನು ರಂಜಿಸಿದರು.

ಮತ್ತೊಂದೆಡೆ ಮ್ಯಾನೇಜ್‌ಮೆಂಟ್ ಫೆಸ್ಟ್, ಮೀಡಿಯಾ ಫೆಸ್ಟ್, ಎಕನಾಮಿಕ್ ಫೆಸ್ಟ್ ಮತ್ತು ಪಾಪ್ ಗಾಯನ, ರಾಕ್ ಬ್ಯಾಂಡ್, ಚಿತ್ರಕಲೆ, ಮ್ಯಾಡ್ ಆ್ಯಡ್ಸ್, ಕ್ವಿಜ್, ಟ್ರೇಸರ್ ಹಂಟ್, ಸ್ಟೋರಿ ಬಿಲ್ಡಿಂಗ್, ವ್ಯಕ್ತಿತ್ವ ಪ್ರದರ್ಶನ, ಪಾಶ್ಚಾತ್ಯ ಸಂಗೀತ ವಾದ್ಯ, ಪಾನಿ ಪುರಿ ವಾರ್, ಕೋಕ್ ಸ್ಟುಡಿಯೋ ಮುಂತಾದ ಭಿನ್ನ ವಿಭಿನ್ನ ಸ್ಪರ್ಧೆಗಳು ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನದ ವೇದಿಕೆಯಾಗಿದ್ದವು.

ಸಾಂಸ್ಕೃತಿಕ ಉತ್ಸವದ ನೃತ್ಯ ಸ್ಪರ್ಧೆಯ ನಿರ್ಣಾಯಕರಾಗಿ ಬಾಲಿವುಡ್ ನಟ ಶರ್ಮನ್ ಜೋಶಿ, ಫ್ಯಾಷನ್ ಶೋ ನಿರ್ಣಾಯಕರಾಗಿ ನಟಿ ಸೋಹಾ ಅಲಿಖಾನ್ ಮತ್ತು ಸರೋಜ್ ಖಾನ್, ರೂಪದರ್ಶಿ ಸಿಮ್ರನ್ ಸಬರ್‌ವಾಲ್ ಭಾಗವಹಿಸಿದ್ದರು. ರೇವಾ ಕಾಲೇಜು, ಆರ್‌ಎನ್‌ಎಸ್, ಬಿಎಂಎಸ್, ಕ್ರೈಸ್ಟ್ ವಿವಿ ಸೇರಿದಂತೆ ಜೈನ್ ವಿವಿಯ ವಿವಿಧ ಕಾಲೇಜುಗಳ ಮ್ಯಾನೇಜ್‌ಮೆಂಟ್ ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಗಮನ ಸೆಳೆದ ಬೀದಿ ನಾಟಕ**

ಮಾಧ್ಯಮಗಳು ಬಿತ್ತರಿಸುವ ನ್ಯೂಸ್ ವರ್ಸಸ್ ಫೇಕ್ ನ್ಯೂಸ್ ಕುರಿತ ಜಾಗೃತಿ ಮೂಡಿಸುವ ಸಲುವಾಗಿ ಕ್ರೈಸ್ಟ್ ವಿಶ್ವವಿದ್ಯಾಲಯದ ಜೀಲಸ್ ಪ್ರೊಡಕ್ಷನ್ ಗುಂಪಿನ ವಿದ್ಯಾರ್ಥಿಗಳು ಬೀದಿ ನಾಟಕ ಪ್ರದರ್ಶಿಸಿದರು. ಮಾಧ್ಯಮ ನಾಲ್ಕನೇ ಅಂಗವಾಗಿದ್ದು, ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ಮಾಡಬೇಕು. ಅದನ್ನು ಬಿಟ್ಟು ಸ್ಪರ್ಧೆಯ ಹೆಸರಿನಲ್ಲಿ ನ್ಯೂಸ್ ಬದಲು ಫೇಕ್ ನ್ಯೂಸ್ ನೀಡುವುದು ಸರಿಯಲ್ಲ ಎಂಬ ಸಂದೇಶ ಅದರಲ್ಲಿತ್ತು. ಇಂತಹ ಮಾಧ್ಯಮಗಳಿಂದ ದೇಶದ ಭವಿಷ್ಯಕ್ಕೆ ಕೊಡಲಿ ಏಟು ಬೀಳಲಿದೆ. ಈ ಕುರಿತು ಯುವಜನತೆ ಎಚ್ಚೆತ್ತುಕೊಳ್ಳಬೇಕು ಎಂಬ ಮಾಹಿತಿ ರವಾನಿಸಿದರು.